

# ಲಾಸ್ ವೇಗಾಸ್‌ನಲ್ಲಿ, ಮೈಮನಗಳ ಸುಳಿಯಲ್ಲಿ...

ಸೋನಾಳ ಜೊತೆಗೆ ಚೋರ್ ಬಜಾರ್‌ಗೆ ಬಂದ ಪೂರ್ವಿಕಾ ಒಂದು ಅಂಗಡಿಯ ಎದುರು ನಿಂತಳು. ಅದು ಪುರಾತನ ವಸ್ತುಗಳ ಸಂಗ್ರಹದ ಅಂಗಡಿ. ಪೂರ್ವಿಕಾ ದೇಶಪಾಂಡೆ ತನ್ನ ವ್ಯಾನಿಟಿ ಬ್ಯಾಗನ್ನು ಅಂಗಡಿಯವನಿಗೆ ತೋರಿಸಿ 'ಭಯ್ಯಾ, ಈ ವ್ಯಾನಿಟಿ ಬ್ಯಾಗನ್ನು ಇಲ್ಲೇ ಆರು ತಿಂಗಳ ಹಿಂದೆ ಐದು ಸಾವಿರಕ್ಕೆ ಕೊಂಡಿದ್ದು. ನನ್ನ ಗೆಳತಿ ಇಪ್ಪತ್ತು ಸಾವಿರ ಕೊಡ್ತೀನಿ ಕೊಡು ಎಂದಳು. ಆದರೆ ಕೊಡಲಿಲ್ಲ ನಾನು. ಅಷ್ಟೊಂದು ಇಂಟಿಮೆಸಿ ಬೆಳೆದಿದೆ ನನಗೆ ಅದರೊಂದಿಗೆ. ಇಂಥದ್ದು ಇನ್ನೊಂದು ಇದ್ದರೆ ತೋರಿಸು, ಕೊಂಡು ಹೋಗಿ ನನ್ನ ಗೆಳತಿಗೆ ಗಿಫ್ಟ್ ಕೊಡ್ತೀನಿ' ಎಂದಿದ್ದಳು. 'ಅಯ್ಯೋ, ಇಂಥ ಅಪರೂಪದ ಸರಕುಗಳು ನನ್ನ ಅಂಗಡಿಯಲ್ಲಿ ಅರ್ಧ ಗಂಟೆಯೂ ಇರುವುದಿಲ್ಲ ಮೇಡಮ್. ಓಹೋ ಈ ಬ್ಯಾಗನ್ನು ಜಬ್ ವಿ ಮೆಟ್ ಸಿನಿಮಾದಲ್ಲಿ ಕರೀನಾ ಕಪೂರ್ ಮೇಡಮ್ ಯೂಸ್ ಮಾಡಿದ್ದಂತೆ. ಸಿನಿಮಾ ಶೂಟಿಂಗ್ ಕಂಪ್ಲೀಟ್ ಆದಾಗ ಲೈಟ್ ಬಾಯ್‌ಗೆ ಫ್ರೀಯಾಗಿ ಕೊಟ್ಟಿದ್ದರಂತೆ. ಅವನು ಸುಮಾರು ವರ್ಷ ಭದ್ರವಾಗಿ ಇಟ್ಟುಕೊಂಡಿದ್ದನಂತೆ. ಹೆಂಡತಿಯ ಹೆರಿಗೆಗೆ ಹಣ ಸಾಲದೆ ಬಂದು ಮನಸ್ಸಿಲ್ಲದ ಮನಸ್ಸಿನಿಂದ ಮೂರೂವರೆ ಸಾವಿರಕ್ಕೆ ಮಾರಿ ಹೋಗಿದ್ದ. ಅವತ್ತು ನಾನು ಜಸ್ಟ್ ಒಂದೂವರೆ ಸಾವಿರ ಮಾರ್ಜಿನ್ ಇಟ್ಟುಕೊಂಡು ನಿಮಗೆ ಮಾರಿದ್ದೆ. ಇವತ್ತು ಇದೇ ಬ್ಯಾಗಿಗೆ ಹತ್ತು ಸಾವಿರ ಕೊಡ್ತೀನಿ ಕೊಡಿ. ನಿಮ್ಮ ಎದುರಿನಲ್ಲೇ ಈ ಬ್ಯಾಗನ್ನು ಹದಿನೈದು ಸಾವಿರಕ್ಕೆ ಮಾರದಿದ್ದರೆ ನನ್ನ ಹೆಸರು ರಹೀಮ್ ಖಾನೇ ಅಲ್ಲ' ಎಂದು ಅಂಗಡಿಯವ ಅಕ್ಕಪಕ್ಕದವರಿಗೆ ಕೇಳಲಿ ಎಂದೇ ಮಾತನಾಡಿದ್ದ.

ಪೂರ್ವಿಕಾ ಅವನ ಮಾತುಗಳಿಗೆ ಕಿವಿ ಕೊಡದೆ ಬ್ಯಾಗಿನಿಂದ ಒಂದು ಸುಂದರವಾದ ಇಟಾಲಿಯನ್ ಆಂಟಿಕ್ ಕೈ ಗಡಿಯಾರ ಹೊರಕ್ಕೆ ತೆಗೆದು 'ಭಯ್ಯಾ ಇದರ ಬೆಲೆ ಎಂಬತ್ತು ಸಾವಿರವಂತೆ. ನನ್ನ ಅಪ್ಪನ ಫ್ರೆಂಡ್ ಇಟಲಿಗೆ ಹೋದಾಗ ನನಗಾಗಿ ತಂದದ್ದು. ನನಗೇಕೊ ಇದರ ಮೇಲೆ ಅಷ್ಟೊಂದು ಫೀಲಿಂಗ್ ಇಲ್ಲ. ಹಾಗಾಗಿ ನಿನಗೆ ಕೊಡ್ತೀನಿ. ಒಂದು ರೇಟು ಹೇಳ್ಬಿಡು. ಚೌಕಾಸಿ ಮಾತು ಮಾತ್ರ ಇಬ್ಬರಿಗೂ ಬೇಡ' ಎಂದಳು. ರಹೀಮ್ ಖಾನ್ ವಾಚನ್ನು ಸ್ವಲ್ಪ ಹೊತ್ತು ಹಿಂದುಮುಂದು ತಿರುಗಿಸಿ ನೋಡಿ 'ಬೆಹೆನ್ ಸರಕೇನೋ ಗ್ಯಾರಂಟಿಯದೆ. ಆದರೆ ಮೊಬೈಲುಗಳು ಬಂದು ಗಡಿಯಾರಗಳ ಕ್ರೇಜ್ ಕಡಿಮೆಯಾಗಿದೆ. ನೀವು ರೆಗ್ಯುಲರ್ ಗಿರಾಕಿ ಅಂತ ಒಂದೇ ರೇಟು ಹೇಳ್ತೀನಿ. ಹನ್ನೆರಡು ಸಾವಿರ ಫೈನಲ್' ಎನ್ನುತ್ತಾ ತನ್ನ ಜುಬ್ಬಾ ಜೇಬಿಗೆ ಕೈಹಾಕಿ ಹನ್ನೆರಡು ಸಾವಿರ ತೆಗೆದು ಅವಳ ಕೈಗೆ ಇಟ್ಟಿದ್ದ. ಇವರಿಬ್ಬರ ವ್ಯವಹಾರವನ್ನು ನೋಡುತ್ತಾ ಅಂಗಡಿಯ ಮುಂದೆ ನಿಂತಿದ್ದ ಆಸಾಮಿಯೊಬ್ಬ ಆ ಗಡಿಯಾರಕ್ಕೆ ಹದಿನೆಂಟು ಸಾವಿರ ಕೊಟ್ಟು ಖರೀದಿಸಿ ಅವರು ಅಲ್ಲಿ ಇದ್ದಂತೆಯೇ ತನ್ನ ಜೇಬಿಗೆ ಹಾಕಿಕೊಂಡು ಜಾಗ ಖಾಲಿ ಮಾಡಿದ್ದ. ಇದನ್ನೆಲ್ಲಾ ಬುರ್ಖಾದೊಳಗಿನ ಕಣ್ಣುಗಳಿಂದ ನೋಡಿದ ಆಸ್ಕರ್ ವೈಲ್ಡನಿಗೆ ಒಂದು ರೀತಿಯ ರೋಮಾಂಚನವೇ ಆಗಿತ್ತು.

ಪೂರ್ವಿಕಾ ಆಸ್ಕರ್ ವೈಲ್ಡನ ಕೈ ಹಿಡಿದು ಮುಂದೆ ಸಾಗುತ್ತಾ 'ಸೋನಾ, ನಾನು ಅವನಿಗೆ ಕೊಟ್ಟ ಗಡಿಯಾರದ ಬೆಲೆ ಎಂಬತ್ತು ಸಾವಿರ ಹೇಳಿದ್ದೆನಲ್ಲ, ಅದು ಸುಳ್ಳು. ನಲವತ್ತು ಸಾವಿರವಷ್ಟೆ. ಅವನು ನನಗೆ ಜಾಸ್ತಿ ರೇಟು ಕೊಡಲೆಂದು ಸುಳ್ಳು ಹೇಳಿದ್ದೆ. ಇನ್‌ಫ್ಯಾಕ್ಟ್ ವ್ಯಾಪಾರವೇ ಸುಳ್ಳು' ಎಂದು ಪಿಸುಗುಟ್ಟಿದಳು. ಆಸ್ಕರ್ ವೈಲ್ಡನಿಗೆ ಆ ಕ್ಷಣ ಇಡೀ ಜಗತ್ತಿನ ಜನರೆಲ್ಲಾ ಸುಳ್ಳು ಹೇಳುತ್ತಿದ್ದಾರೆ ಅನ್ನಿಸಿತು. ಸುಮಾರು ಒಂದೂವರೆ ಗಂಟೆ ಅವರು ತಿರುಗಾಡಿದ್ದರು. ಸಮಯ ಸರಿದದ್ದೇ ಅರಿವಾಗಲಿಲ್ಲ. ಏನಾದರೂ ತಗೋತೀಯ ಎಂದು ಪೂರ್ವಿಕಾ ಆಸ್ಕರ್ ವೈಲ್ಡನನ್ನು ಕೇಳಿದ್ದಳು. ಆದರೆ ಆಸ್ಕರ್ ವೈಲ್ಡನಿಗೆ ಏನನ್ನೂ ಕೊಳ್ಳಬೇಕೆನಿಸಲಿಲ್ಲ. ಪೂರ್ವಿಕಾ ಒಂದಿಷ್ಟು ಬ್ಯಾಂಗಲ್ಸ್, ನೈಲ್ ಪಾಲಿಶ್, ಲಿಪ್‌ಸ್ಟಿಕ್ ಮುಂತಾದವುಗಳನ್ನು ಕೊಂಡು ಬ್ಯಾಗನ್ನು ಸ್ವಲ್ಪ ಭಾರ ಮಾಡಿಕೊಂಡಳು. ಅಲ್ಲಿಂದ ಗ್ರಾಂಟ್ ರೋಡಿನ ಡೆಲ್ಲಿ ದರ್ಬಾರ್ ಹೋಟೆಲ್ಲಿಗೆ ಹೋಗಿ ಬಿಸಿಬಿಸಿ ಚಹ ಕುಡಿದು ಮರಾಠ ಮಂದಿರದ ಕಡೆ ನಡೆದರು. ಕಾರಿನ ಹಿಂದಿನ ಸೀಟಿನಲ್ಲಿ ಕುಳಿತು ಇಬ್ಬರೂ ಬುರ್ಖಾ ಬಿಚ್ಚಿದ್ದರು. ಪೂರ್ವಿಕಾ ಒಮ್ಮೆಲೇ ಆಸ್ಕರ್ ವೈಲ್ಡನನ್ನು ತನ್ನೆಡೆಗೆ ಎಳೆದುಕೊಂಡು ತುಟಿಗಳನ್ನು ಚುಂಬಿಸಿದ್ದಳು. ವೈಲ್ಡ್ ತಾನೂ ಪೂರ್ವಿಕಾಳ ಮೈಬಳಸಿ ಬಹಳವಾಗಿ ಸ್ಪಂದಿಸಿದ್ದ. ಕಾರು ಮರಾಠ ಮಂದಿರ್ ಥಿಯೇಟರ್ ಗೇಟ್ ದಾಟಿತ್ತು. ಆಸ್ಕರ್ ವೈಲ್ಡ್ ಖುಷಿಯಾಗಿದ್ದ.

'ಬೆಳಿಗ್ಗೆ ನಾನು ಹೊರಟು ಬರುವ ಗಡಿಬಿಡಿಯಲ್ಲಿ ಹಲ್ಲು ಬ್ರಶ್ ಮಾಡಿರಲಿಲ್ಲ' ಸ್ವಲ್ಪ ಮುಜುಗರ ತುಂಬಿಕೊಂಡೇ ಹೇಳಿದ್ದ.

'ನಾನು ಕೇಳಿದ್ನ ಆ ವಿಷಯಾನ. ನಾನೂ ಕೂಡ ಬ್ರಶ್ ಮಾಡಿರಲಿಲ್ಲ. ಏನಾಯ್ತೀಗ ನನ್ನ ಬಾಯಲ್ಲಿನ ಎಂಜಲನ್ನೆಲ್ಲ ಸೊರ ಸೊರ ಹೀರಿ ಖಾಲಿ ಮಾಡಿಬಿಟ್ಟೆಯಲ್ಲ. ಇದೇ ಫಸ್ಟ್ ಟೈಮಾ ಕಿಸ್ ಮಾಡ್ತಿರೋದು' ಯಾವ ನಾಚಿಕೆಯೂ ಇಲ್ಲದೆ ಕೇಳಿದ್ದಳು. ಅವಳ